5150 (5620) ಶೀ ಸುನೀಲ್ ಕುಮಾರ್ ವಿ. (ಕಾರ್ಕಳ): ಮಾನ್ಯ ರೇಷ್ಮೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಒಟ್ಟು ಕೃಷಿಯಲ್ಲಿ ರೇಷ್ಮೆ ಕೃಷಿಯ ಕ್ಷೇತ್ರವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಭಾಗಕ್ಕೆ ರೇಷ್ಮೆ ಬೆಳೆಯನ್ನು ಪ್ರೋತ್ಸಾಹಿಸಲು ಸರ್ಕಾರ ಕೈಗೊಂಡ ಕಾರ್ಯಯೋಜನೆಗಳೇನು;

ಇ) ಉಡುಪಿ ಜಿಲ್ಲೆಯಲ್ಲಿ ರೇಷ್ಮೆ ಉತ್ಪಾದನಾ ಪ್ರಮಾಣವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

ಈ) ರೇಷ್ಮೆ ಬೆಳೆ ಕೃಷಿಯ ವಿಸ್ತೀರ್ಣವೆಷ್ಟು;

ಉ) ಕಾರ್ಕಳ ತಾಲ್ಲೂಕಿನಲ್ಲಿ ರೇಷ್ಮೆ ಕೃಷಿ ಫಾರಂ ಎಲ್ಲೆಲ್ಲಿವೆ, ಇವುಗಳ ಅಭಿವೃದ್ಧಿ ಸುಧಾರಣೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಊ) ಈ ಭಾಗದ ರೇಷ್ಮೆ ಕೃಷಿ ಉತ್ತೇಜನಕ್ಕೆ ಹೆಚ್ಚಿನ ಸಿಬ್ಬಂದಿಗಳನ್ನು ನೇಮಕ ಮಾಡಿದೆಯೇ;

ಋ) ಹಾಗಿದ್ದಲ್ಲಿ, ಇವರ ಕಾರ್ಯವ್ಯಾಪ್ತಿ, ಸ್ವರೂಪಗಳೇನು? (ವಿವರ ನೀಡುವುದು)

ಶ್ರೀ ಜೆನ್ನಿಗಪ್ಪ (ಮಾನ್ಯ ರೇಷ್ಮೆ ಸಚಿವರು) :

ಅ) ಮಾರ್ಚ್ 2005ರ ಅಂತ್ಯಕ್ಕೆ ಉಡುಪಿ ಜಿಲ್ಲೆಯ ತಾಲ್ಲೂಕುವಾರು ಹಿಪ್ಪುನೇರಳೆ ವಿಸ್ತೀರ್ಣ ಕೆಳಕಂಡಂತಿದೆ:

ಕ್ರ ಸಂ	ತಾಲ್ಲೂಕು	ಒಟ್ಟು ಕೃಷಿಯ ವಿಸ್ತೀರ್ಣ (ಎಕರೆಗಳಲ್ಲಿ)	ಹಿಪ್ಪುನೇರಳೆ ವಿಸ್ತೀರ್ಣ
1	ಉಡುಪಿ	128145	32.20
2	ಕುಂದಾಪುರ	126460	15.00
3	ಕಾರ್ಕಳ	112515	35.00
	ಒಟ್ಟು	367120	82.20

ಆ) ಉಡುಪಿ ಜಿಲ್ಲೆ ಒಳಗೊಂಡಂತೆ ರಾಜ್ಯದ ರೇಷ್ಮೆ ಬೆಳೆಯ ಅಭಿವೃದ್ಧಿಗಾಗಿ ಕೆಳಕಂಡ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಅ) ರಾಜ್ಯ ಸರ್ಕಾರ ಮತ್ತು ಕೇಂದ್ರ ರೇಷ್ಮೆ ಮಂಡಳಿಯ ಸಹಯೋಗದ ಕೆಟಲಿಟಿಕ ಅಭಿವೃದ್ಧಿ ಕಾರ್ಯಕ್ರಮಗಳು:

1) ಹೊಸ ಹಿಪ್ಪುನೇರಳೆ ತಳಿ ಅಭಿವೃದ್ಧಿಗೆ ಪ್ರೋತ್ಸಾಹಧನ
2) ಹಿಪ್ಪುನೇರಳೆ ತೋಟಗಳಿಗೆ ಹನಿ ನೀರಾವರಿ ಅಳವಡಿಸಲು ಸಹಾಯಧನ
3) ರೇಷ್ಮೆ ಹುಳು ಸಾಕಣೆಗೆ ಮನೆ ನಿರ್ಮಾಣಕ್ಕೆ ಸಹಾಯಧನ
4) ರೇಷ್ಮೆ ಹುಳು ಸಾಕಾಣಿಕೆ ಸಲಕರಣಗಳಿಗೆ ಸಹಾಯಧನ
5) ರೋಗ ನಿಯಂತ್ರಣಕ್ಕಾಗಿ ಸೋಂಕು ನಿವಾರಕಗಳ ಸರಬರಾಜು
6) ಚಾಕಿ ಸಾಕಾಣಿಕೆ ಕೇಂದ್ರಗಳ ನಿರ್ಮಾಣ ಮತ್ತು ಸಲಕರಣಗಳಿಗೆ ಸಹಾಯಧನ

7) ಹೊಸದಾಗಿ ರೇಷ್ಮೆ ಕೃಷಿ ಕೈಗೊಳ್ಳುವ ರೈತರಿಗೆ ತರಬೇತಿ ಮತ್ತು ಟೂಲ್ ಕಿಟ್ ಸರಬರಾಜು

8) ಮಲ್ಟಿಎಂಡ್ ರೀಲಿಂಗ್ ಘಟಕಗಳ ಸ್ಥಾಪನೆಗೆ ಸಹಾಯಧನ

9) ಮಲ್ಟಿಎಂಡ್ ಘಟಕಗಳಲ್ಲಿ ಉತ್ಪಾದಿಸಿದ ದ್ವಿತಳಿ ರೇಷ್ಮೆಗೆ ಪ್ರತಿ ಕೆ.ಜಿ.ಗೆ ರೂ.100/– ಪ್ರೋತ್ಸಾಹಧನ.

ಬ) ಇಲಾಖೆಯಿಂದ ನೀಡುತ್ತಿರುವ ಸೌಲಭ್ಯಗಳು

1) ನೂತನ ತಾಂತ್ರಿಕತೆಗಳ ಅನುಸರಣೆಗಾಗಿ ತರಬೇತಿ

2) ಉತ್ತಮ ಗುಣಮಟ್ಟದ ಮೊಟ್ಟೆಗಳ ಸರಬರಾಜು

3) ಬೆಳೆದ ಗೂಡುಗಳ ವಿಲೇವಾರಿಗಾಗಿ ಗೂಡು ಮಾರುಕಟ್ಟೆಗಳ ನಿರ್ವಹಣೆ

4) ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ಸಹಾಯ

5) ಸ್ಥಳೀಯವಾಗಿ ನೂಲು ಬಿಚ್ಚುವ ಘಟಕ ನಿರ್ವಹಣೆ

ಇದಲ್ಲದೆ ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆ / ಹಿಪ್ಪುನೇರಳೆ ಬೆಳೆಯಲು ಪ್ರೋತ್ಸಾಹ / ರೇಷ್ಮೆ ಹುಳು ಸಾಕುವ ಮನೆ ನಿರ್ಮಾಣಕ್ಕೆ ಸಹಾಯಧನ / ರೇಷ್ಮೆ ಹುಳು ಸಾಕುವ ಸಲಕರಣೆ ಸರಬರಾಜು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಇ) ಉಡುಪಿ ಜಿಲ್ಲೆಯಲ್ಲಿ ತಾಲ್ಲೂಕುವಾರು ರೇಷ್ಮೆ ಗೂಡಿನ ಉತ್ಪಾದನಾ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ತಾಲ್ಲೂಕು	ರೇಷ್ಮೆಗೂಡಿನ ಉತ್ಪಾದನಾ ಪ್ರಮಾಣ (ಮೆ.ಟನ್)
1	ಉಡುಪಿ	1.358
2	ಕುಂದಾಪುರ	0.247
3	ಕಾರ್ಕಳ	0.212
	ಒಟ್ಟು	**1.817**

ಈ) ಉಡುಪಿ ಜಿಲ್ಲೆಯ ರೇಷ್ಮೆ ಬೆಳೆ ಕೃಷಿಯ ವಿಸ್ತೀರ್ಣ 82.20 ಎಕರೆಗಳು

ಉ) ಕಾರ್ಕಳ ತಾಲ್ಲೂಕಿನಲ್ಲಿ ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರಗಳಿಲ್ಲ. ಆದ್ದರಿಂದ ಇವುಗಳ ಅಭಿವೃದ್ಧಿ ಸುಧಾರಣೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಕಾರ್ಕಳ ತಾಲ್ಲೂಕಿನಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ಕೆಳಕಂಡ ಅಧಿಕಾರಿ/ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ.

1. ರೇಷ್ಮೆ ಸಹಾಯಕ ನಿರ್ದೇಶಕರು – ಒಬ್ಬರು
2. ರೇಷ್ಮೆ ನಿರೀಕ್ಷಕರು – ಒಬ್ಬರು
3. ರೇಷ್ಮೆ ಪ್ರದರ್ಶಕರು – ಮೂವರು

ಈ ತಾಲ್ಲೂಕಿನಲ್ಲಿ ಹಿಪ್ಪುನೇರಳೆ ವಿಸ್ತೀರ್ಣ ಹೆಚ್ಚಾದಲ್ಲಿ ಅದಕ್ಕನುಗುಣವಾಗಿ ಹೆಚ್ಚಿನ ಸಿಬ್ಬಂದಿ ಅವಶ್ಯಕತೆ ಇದ್ದಲ್ಲಿ ನಿಯೋಜಿಸಲಾಗುವುದು.

ಖು) ಇವರ ಕಾರ್ಯವ್ಯಾಪ್ತಿ ಕಾರ್ಕಳ ತಾಲ್ಲೂಕು. ಇವರ ಕಾರ್ಯಸ್ವರೂಪಗಳು ಕೆಳಕಂಡಂತಿದೆ.

1. ರೇಷ್ಮೆ ಕೃಷಿ ಚಟುವಟಿಕೆಗಳಾದ ಹಿಪ್ಪುನೇರಳೆ ವ್ಯವಸಾಯ, ರೇಷ್ಮೆ ಹುಳು ಸಾಕಾಣಿಕೆ, ನೂಲು ಬಿಚ್ಚಾಣಿಕೆ ಇತ್ಯಾದಿಗಳ ಬಗ್ಗೆ ತಾಂತ್ರಿಕ ಮಾರ್ಗದರ್ಶನ ನೀಡುವುದು ಮತ್ತು ತರಬೇತಿ ಒದಗಿಸುವುದು.
2. ಅಧಿಕ ಇಳುವರಿ ನೀಡುವ ಹಿಪ್ಪುನೇರಳೆ ತಳಿಗಳನ್ನು ಕಿಸಾನ್ ನರ್ಸರಿಗಳಲ್ಲಿ ಅಭಿವೃದ್ಧಿಪಡಿಸಿ ಒದಗಿಸುವುದು.
3. ರೇಷ್ಮೆ ಬೆಳೆಗಾರರಿಗೆ ವಿಸ್ತರಣೆ, ಚಾಕಿ ಸಾಕಣೆ ಮತ್ತು ರೋಗ ನಿಯಂತ್ರಣ ಸೌಲಭ್ಯಗಳನ್ನು ಒದಗಿಸುವುದು.
4. ರೇಷ್ಮೆ ಚಟುವಟಿಕೆಗಳಿಗಾಗಿ ಬ್ಯಾಂಕುಗಳಿಂದ ಸಾಲ/ಸೌಲಭ್ಯ ಪಡೆಯಲು ರೈತರಿಗೆ ಸಹಾಯ ಮಾಡುವುದು.
5. ರೇಷ್ಮೆ ಬೆಳೆಗಾರರು ಹೊಸ ತಾಂತ್ರಿಕತೆಗಳನ್ನು ಅಳವಡಿಸಿ, ಉತ್ಪಾದನೆ, ಉತ್ಪಾದಕತೆ ಮತ್ತು ಗುಣಮಟ್ಟ ಹೆಚ್ಚಿಸಿ, ಉತ್ಪಾದನಾ ವೆಚ್ಚ ಕಡಿಮೆ ಮಾಡಿ ಆದಾಯ ಹೆಚ್ಚಿಸಲು ಪ್ರೇರೇಪಿಸುವುದು.
6. ಸ್ಥಳೀಯವಾಗಿ ನೂಲು ಬಿಚ್ಚಾಣಿಕೆ ಘಟಕದಿಂದ ಗೂಡು ಖರೀದಿಗೆ ವ್ಯವಸ್ಥೆ ಮಾಡಲಾಗಿದೆ.

5151 (5621) ಶೀ ಸುನೀಲ್ ಕುಮಾರ್ ವಿ. (ಕಾರ್ಕಳ): ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ, ರಾಜ್ಯದಲ್ಲಿ ಹೊಸ ವಿಮಾನ ನಿಲ್ದಾಣ ಪ್ರಾರಂಭಿಸಲು ಸರ್ಕಾರ ಯೋಚಿಸಿದೆಯೇ, ಎಲ್ಲೆಲ್ಲಿ ಪ್ರಾರಂಭಿಸಲಾಗುವುದು; (ವಿವರ ಒದಗಿಸುವುದು)

ಆ) ಈ ನಿಟ್ಟಿನಲ್ಲಿ ಉಡುಪಿ ಜಿಲ್ಲೆಯ ಯಾವ ಸ್ಥಳವನ್ನು ಗುರುತಿಸಿ ಸೇರ್ಪಡೆಗೊಳಿಸಿದೆ;

ಇ) ವಿಮಾನ ನಿಲ್ದಾಣ ಯೋಜನೆಗೆ ಒದಗಿಸಿರುವ ಹಣದ ವಿವರಗಳೇನು, ಹಾಲಿ ಇರುವ ನಿಲ್ದಾಣಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದೇ;

ಈ) ಹಾಗಿದ್ದಲ್ಲಿ ವಿವರ ನೀಡುವುದು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಸಚಿವರು):

ಅ) ರಾಜ್ಯದಲ್ಲಿ ಗುಲ್ಬರ್ಗಾ, ಹಾಸನ, ಬಿಜಾಪುರಗಳಲ್ಲಿ ಹೊಸ ವಿಮಾನ ನಿಲ್ದಾಣ ಪ್ರಾರಂಭಿಸಲು ಯೋಚಿಸಲಾಗಿದೆ.

ಆ) ಯಾವ ಸ್ಥಳವನ್ನು ಗುರುತಿಸಿರುವುದಿಲ್ಲ.

ಇ) ಗುಲ್ಬರ್ಗಾ ಹಾಗೂ ಹಾಸನದಲ್ಲಿ ಭೂಸ್ವಾಧೀನ ಕೈಗೊಳ್ಳಲಾಗಿದೆ. ಬಿಜಾಪುರದಲ್ಲಿ ಸ್ಥಳ ಪರಿಶೀಲನೆ ಮಾಡಿ ಗುರುತಿಸಬೇಕಾಗಿದೆ. ಹಾಲಿ ಇರುವ ವಿಮಾನ ನಿಲ್ದಾಣಗಳಾದ ಮೈಸೂರು ವಿಮಾನ ನಿಲ್ದಾಣವನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ನಿರ್ಮಿಸಿ ಅಭಿವೃದ್ಧಿಪಡಿಸಲು ನಾಗರೀಕ ವಿಮಾನಯಾನ ಮಂತ್ರಾಲಯ ಒಪ್ಪಿದ್ದು ಒಂದು ಒಡಂಬಡಿಕೆ ಏರ್ಪಡಬೇಕಾಗಿದೆ. ಮಂಗಳೂರು ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ಬೇಕಾದ ಭೂಮಿಯನ್ನು ಭಾರತೀಯ